ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳವರ ನ್ಯಾಯಾಲಯ, ಕೃಷ್ಣರಾಜಪೇಟೆ.

ಓ ಎಸ್ 139ಃ2016 ಪ್ರಾಸಾಃ3

| | |
|---|---|
| ಸಾಕ್ಷಿದಾರರ ಹೆಸರುಃ- | ಜಗದೀಶ |
| ತಂದೆಯ ಹೆಸರುಃಗಂಡನ ಹೆಸರುಃ | ಬೈರೇಗೌಡ |
| ವಯಸ್ಸುಃ- | 40 ವರ್ಷ |
| ವೃತ್ತಿಃ- | ಆಟೋ ಚಾಲಕ ಮತ್ತು ವ್ಯವಸಾಯ |
| ವಾಸ ಸ್ಥಳಃ- | ಕೆ ಆರ್ ಪೇಟೆ ಟೌನ್ |

ಸಾಕ್ಷಿಗೆ ದಿನಾಂಕಃ20-08-2018 ರಂದು ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆ:- ವಾದಿ ಪರ ಶ್ರೀ ಎನ್ ಎಂ ವಕೀಲರಿಂದ ಃ**

ವಾದಿಯರು ಗೊತ್ತು. ಪ್ರತಿವಾದಿ ಗೊತ್ತು. ಈಗ **3** ವರ್ಷದ ಹಿಂದೆ ವಾದಿಯರು ಮತ್ತು ಪ್ರತಿವಾದಿಯ ನಡುವೆ ಗಲಾಟೆ ಆಗಿದ್ದು ಇಬ್ಬರ ನಡುವೆ ಈ ಕೇಸು ನಡೆಯುತ್ತಿರುವ ವಿಚಾರ ಗೊತ್ತು. ಸರ್ವೆ ನಂ **10ಃ2 , 27** ಗುಂಟೆ ಜಮೀನು ವಿಚಾರವಾಗಿ ಇಬ್ಬರ ಮಧ್ಯೆ ಈ ವ್ಯಾಜ್ಯ ಇದೆ. ಸರ್ವೆ ನಂ **10ಃ1** ನನ್ನ ತಾತನ ಜಮಿನು ಆಗಿದ್ದು ಸದರಿ ಜಮೀನಿನ ಪಕ್ಕ **10ಃ2 27** ಗುಂಟೆ ಇದೆ. ಮುತ್ತರಾಯನ ಸ್ವಾಮಿ ಬಡಾವಣೆ ಹತ್ತಿರ ದಾವಾ ಜಮೀನು ಇದೆ. ಕೆ ಆರ್ ಪೇಟೆ ಮೈಸೂರು ಮುಖ್ಯ ರಸ್ತೆ ಕಡೆಯಿಂದ ಉತ್ತರ ದಿಕ್ಕಿಗೆ ದಾವಾ ಜಮೀನು ಬರುತ್ತದೆ. ಸಿದ್ದಲಿಂಗೇಗೌಡ ಮೊದಲು ದಾವಾ ಜಮೀನಿನಲ್ಲಿ ಸ್ವಾದೀನದಲ್ಲಿದ್ದು ಅವರ ಪೌತಿ ನಂತರ ಈಗ ವಾದಿಯರು ಸದರಿ ಜಮೀನಿನ ಸ್ವಾಧೀನದಲ್ಲಿ ಇದ್ದಾರೆ. ದಾವಾ ಜಮೀನಿನ ಸ್ವಾದೀನದಲ್ಲಿ ವಾದಿಯರೇ ಇದ್ದು ಪ್ರತಿವಾದಿಯು ಏಕಾಏಕಿ ಸದರಿ ಜಮೀನಿನಲ್ಲಿ ಮನೆ ಕಟ್ಟಲು ಹೋಗಿದ್ದಂತೆ ಈ ಕೇಸು ಹಾಕಿದ್ದಾರೆ. ಸದರಿ ಮನೆಯ ಪೋಟೋ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈಗ ನಿಪಿ **8** ರಿಂದ **15** ಪೋಟೋಗಳನ್ನು ತೋರಿಸುತ್ತಿದ್ದು ಸಾಕ್ಷಿಯು ಸದರಿ ಪೋಟೋಗಳನ್ನು ನೋಡಿ ಕಟ್ಟಡ ನಡೆಯುತ್ತಿರುವ ಜಮೀನು ದಾವಾ ಜಮೀನು ಆಗಿತ್ತು ಎಂದು ಗುರುತಿಸುತ್ತಾರೆ. ನನಗೆ ತಿಳಿದ ಹಾಗೆ ಇವತ್ತಿನವರೆಗೂ ದಾವಾ ಜಮೀನಿನ ಸ್ವಾದೀನದಲ್ಲಿ ವಾದಿಯರೇ ಇದ್ದಾರೆ.

**ಪಾಟೀ ಸವಾಲು:- ಪ್ರತಿವಾದಿ ಪರ ಶ್ರೀ ಕೆ ಎನ್ ಎನ್ ವಕೀಲರಿಂದಃ-**

ನನ್ನ ತಾಯಿ ದೇವರಾಜಮ್ಮ ಎಂದರೆ ಸರಿ. ನನ್ನ ತಾಯಿಯ ತಂದೆಯ ಹೆಸರು ಜವರೇಗೌಡ ಎಂದರೆ ಸರಿ. ಸದರಿ ಜವರೇಗೌಡನ ತಂದಯ ಹೆಸರು ಸಿದ್ದಲಿಂಗೇಗೌಡ ಎಂದರೆ ಸರಿ. ನನ್ನ ತಾತ ಜವರೇಗೌಡನ ತಮ್ಮ ಜೋಗಿನಿಂಗೇಗೌಡ ಎಂದರೆ ಸರಿ. ನಮ್ಮ ವಂಶದಲ್ಲಿ ಮಾಯಪ್ಪ ಎಂಬುವರು ಇರಲಿಲ್ಲ.

ಕನ್ನಡ ಓದಲು ಬರುತ್ತದೆ. ದಾವಾ ಅನುಸೂಚಿಯಲ್ಲಿ ಹೇಳಿದ ಚಕ್ಕುಬಂದಿ ಪ್ರಕಾರ ಜಮೀನು ನೋಡಿದ್ದೇನೆ. ದಾವಾ ಜಮೀನಿನ ಪಶ್ಚಿಮಕ್ಕೆ ತೋರಿಸಿರುವ ಮಾಯಪ್ಪನ ಜಮೀನು ಅಂದರೆ ಸದರಿ ಮಾಯಪ್ಪ 1 ನೇ ವಾದಿಯ ತಂದೆ ಎಂದರೆ ಸರಿ. ದಾವಾ ಜಮೀನಿನ ಉತ್ತರಕ್ಕೆ ಮೊಗಣ್ಣಗೌಡ ಮತ್ತು ಕಾಳೇಗೌಡರ ಜಮೀನು ಇದೆಯಾ ಎಂದರೆ ಸಾಕ್ಷಿ ಹೌದು ಎಂದು ಹೇಳಿ ಸದರಿ ಜಮೀನನ್ನು ಮಂಜುಳ ಲಾಯರ್ ಉಳುಮೆ ಮಾಡಿಕೊಂಡು ಬರುತ್ತಿದ್ದಾರೆ ಎನ್ನುತ್ತಾರೆ. ದಾವಾ ಜಮೀನಿನ ದಕ್ಷಿಣಕ್ಕೆ ತೋರಿಸಿರುವ ಬುಡುಗಿ ಸಿಂಗ್ರೀ ವಗೈರೆ ಜಮೀನು ನೋಡಿದ್ದೀರಾ ಎಂದರೆ ಸಾಕ್ಷಿಯು ಸದರಿಯವರು ಅಲ್ಲಿ ಉಳುಮೆ ಮಾಡುವುದನ್ನು ಮೊದಲು ನೋಡಿದ್ದೆ ಆದರೆ ಈಗ ಯಾರು ಉಳುಮೆ ಮಾಡುತ್ತಿಲ್ಲ ಎನ್ನುತ್ತಾರೆ.

ದಾವಾ ಜಮೀನಿನ ಪಶ್ಚಿಮಕ್ಕೆ ನಮ್ಮ ತಾತ ಜವರೇಗೌಡ ಮತ್ತು ಜೋಗಿನಿಂಗೇಗೌಡರ ಜಮೀನು ತಮ್ಮಯ್ಯ ಇವರಿಗೆ 1984 ರಲ್ಲಿ ಮಾರಾಟ ಮಾಡಿದ ಜಮೀನು ಎಂದರೆ ಸರಿ. ಸರ್ವೆ ನಂ 10ಃ1 ರಲ್ಲಿ ಸದರಿ ಜಮೀನು ಮಾರಾಟ ಮಾಡಿದ್ದಾರೆ ಎಂದರೆ ಸರಿ.

ಸಾಕ್ಷಿಗೆ ಈಗ ಒಂದು ದೃಢೀಕೃತ ಅಡಮಾನ ಪತ್ರವನ್ನು ತೋರಿಸಿದ್ದು ಸದರಿ ಅಡಮಾನ ಪತ್ರವನ್ನು ನಮ್ಮ ತಾತ ಜವರೇಗೌಡ ಕೋ ಅಪರೇಟಿವ್ ಸೊಸೈಟಿಗೆ ಅಡಮಾನ ಮಾಡಿದ್ದರು ಎಂದರೆ ಸಾಕ್ಷಿ ಅದನ್ನು ಒಪ್ಪಿದ್ದು ಸದರಿ ಅಡಮಾನ ಪತ್ರವನ್ನು ನಿಡಿ 1 ಎಂದು ಗುರುತಿಸಲಾಯಿತು. ನಿಡಿ 1 ರಲ್ಲಿ ಇರುವ

ಚಕ್ಕುಬಂದಿ ನನಗೆ ಗೊತ್ತಿಲ್ಲ. ಸರ್ವೆ ನಂ 10೩1 ರ ಪೂರ್ವಕ್ಕೆ ಇರುವ ಜಮೀನು ದಾವಾ ಜಮೀನು ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ಹೇಳಿ ನಿಂಗೇಗೌಡರ ಜಮೀನು ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಜಮೀನಿನ ಸುತ್ತಮುತ್ತಲೂ ಪ್ರತಿವಾದಿಯ ತಂದೆ ನಿಂಗೇಗೌಡ ಎನ್ನುವ ವ್ಯಕ್ತಿ ಬಿಟ್ಟು ಬೇರೆ ಯಾರು ವ್ಯಕ್ತಿ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಜಮೀನಿನ ಪಶ್ಚಿಮಕ್ಕೆ ಅಂದರೆ ಹೇಮಗಿರಿ ರಸ್ತೆಯ ದಕ್ಷಿಣಕ್ಕೆ ಮಾಯಪ್ಪನ ಕಟ್ಟೆ ಎಂದು ಇತ್ತು ಎಂದರೆ ಸದರಿ ಕಟ್ಟೆ ಬಗ್ಗೆ ಗೊತ್ತಿಲ್ಲ. ಸದರಿ ಜಮೀನಿನ ಬಗ್ಗೆಯೂ ನನಗೆ ಗೊತ್ತಿಲ್ಲ ಎಂದರೆ ಸರಿ. ದಾವಾ ಜಮೀನಿನ ಉತ್ತರಕ್ಕೆ ಇರುವ ಮೊಗಣ್ಣಗೌಡ ಮತ್ತು ಕಾಳೇಗೌಡರ ಜಮೀನು ಈಗ ಸರ್ಕಾರಕ್ಕೆ 1975 ರಲ್ಲಿ ಅಕ್ವೈರ್ ಆಗಿದೆ ಎಂದರೆ ಗೊತ್ತಿಲ್ಲ. ದಾವಾ ಜಮೀನಿನ ಚಕ್ಕುಬಂದಿಯಲ್ಲಿ ತೋರಿಸಿರುವ ಜಮೀನು ಈಗ ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ದಾವಾ ಜಮೀನಿನ ಚಕ್ಕುಬಂದಿಯ ಜಮೀನಿನಲ್ಲಿ ವಾದಿಯರು ಈಗ ಸ್ವಾಧೀನದಲ್ಲಿದ್ದಾರೆ ಎನ್ನುತ್ತಾರೆ.

ಚಂದ್ರೇಗೌಡ ಎನ್ನುವವರು ಅಸಲು ದಾವಾ ನಂ 362೩2010 ರಂತೆ ಮಂಜುಳ ಲಾಯರ್ ಇವರ ತಂದೆ ಇವರು ಕೇಸು ಹಾಕಿರುವ ವಿಚಾರ ಗೊತ್ತಿಲ್ಲ. ಸರ್ವೆ ನಂ 10೩1 ರ ನಮ್ಮ ತಾಯಿಯ ತಂದೆ ಜವರೇಗೌಡ ಮತ್ತು ಅವರ ತಮ್ಮ ಜೋಗಿನಿಂಗೇಗೌಡ ನಿಡಿ 1 ರಲ್ಲಿ ತೋರಿಸಿದ ಜಮೀನು 1984 ರಲ್ಲಿ ತಮ್ಮಯ್ಯ ಇವರಿಗೆ ಮಾರಾಟ ಮಾಡಿದರು ಎಂದರೆ ಸರಿ. ಪೂರ್ವಕ್ಕೆ 10೩2 ಪಿ1 ಪಿ2 ಅಂದರೆ ಪ್ರತಿವಾದಿಯರ ಜಮೀನು , ಪಶ್ಚಿಮಕ್ಕೆ ತಮ್ಮಯ್ಯನ ಜಮೀನು, ಉತ್ತರಕ್ಕೆ ರಾಮೇಗೌಡ ಮತ್ತು ಕಮಲಮ್ಮಳ ಜಮೀನು, ದಕ್ಷಿಣಕ್ಕೆ ಕಾಡನಸಿದ್ದೇಗೌಡನ ಮಕ್ಕಳ ಜಮೀನು ಈ ಜಮೀನಿನಲ್ಲಿ ಪ್ರತಿವಾದಿಯರು ಮನೆ ಕಟ್ಟುತ್ತಿದ್ದಾರೆ ಎಂದರೆ ಸರಿಯಲ್ಲ. ಈಗ ಹೇಳಿದ ಚಕ್ಕುಬಂದಿಯ ಜಮೀನು ನಾನು ನೋಡಿಲ್ಲ. ತಮ್ಮಯ್ಯನ ಜಮೀನಿನ ಪೂರ್ವಕ್ಕೆ ಪ್ರತಿವಾದಿ ಕಟ್ಟುತ್ತಿರುವ ಮನೆ ಜಮೀನಿಗೂ ಹಾಗೂ ದಾವಾ ಜಮೀನಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿ. ತಮ್ಮಯ್ಯನ ಪೂರ್ವಕ್ಕೆ ಕಟ್ಟುತ್ತಿರುವ ಮನೆ ಸುಮಾರು 2 ಕಿ.ಮೀ ಸುತ್ತಮುತ್ತಲೂ ನಮ್ಮ ಯಾವುದೇ ಜಮೀನು ಇಲ್ಲ ಎಂದರೆ ಸಾಕ್ಷಿಯು ಇದೆ ಎನ್ನುತ್ತಾರೆ. ಸಾಕ್ಷಿಯು ನಮ್ಮ ಜಮೀನು ಸುಮಾರು 2 ಕಿ.ಮೀ ಒಳಗಡೆ ಇದೆ ಎನ್ನುತ್ತಾರೆ.

ಮಾಯಮ್ಮನ ಮಗ ಸಿದ್ದೇಗೌಡ ಅಂದರೆ 1 ನೇ ವಾದಿಯ ತಂಗಿ ಮಗ ಗೊತ್ತು. ನಾನು ಮತ್ತು ಸದರಿ ಸಿದ್ದೇಗೌಡ ಚೆನ್ನಾಗಿದ್ದೇವೆ ಎಂದರೆ ಸರಿ. ಸರ್ವೆ ನಂ 342 ಕ್ಕೆ ಸಂಬಂದಿಸಿದಂತೆ ಪ್ರತಿವಾದಿ ಬಂದು ಗಲಾಟೆ ಮಾಡಿದ್ದಾರೆಂದು ನಾನು ಮತ್ತು ನಮ್ಮ ತಾಯಿ ಸಹೋದರಿಯರು ಸೇರಿ ಕ್ರೈ ನಂ 125೩2013 8 ರಂತೆ ಅವರ ಮೇಲೆ ಕ್ರಿಮಿನಲ್ ಕೇಸ್ ಕೊಟ್ಟಿದ್ದೇವೆ ಎಂದರೆ ಅವರು ನಮ್ಮ ಮೇಲೆ ಕೇಸು ಕೊಟ್ಟಿದ್ದು ಅವರೂ ಕೊಟ್ಟಿದ್ದಾರೆ ಎನ್ನುತ್ತಾರೆ. ಪ್ರತಿವಾದಿ ನಮ್ಮ ಮೇಲೆ ಕೊಟ್ಟಿರುವ ಕ್ರಿಮಿನಲ್ ಕೇಸ್ ನಲ್ಲಿ ಮೇಲೆ ಹೇಳಿದ ಸಿದ್ದೇಗೌಡ ಸಹ ಆರೋಪಿಯಾಗಿದ್ದಾನೆ ಎಂದರೆ ಸರಿ. ಸದರಿ ಪ್ರತಿವಾದಿಯ ಅಕ್ಕ ಭಾಗ್ಯಮ್ಮ ಮತ್ತು ಅವರ ಮಕ್ಕಳ ಮೇಲೆ ನಾನು ಸರ್ವೆ ನಂ.342 ಕ್ಕೆ ಸಂಬಂದಪಟ್ಟಂತೆ ಉಪ ವಿಭಾಗಾದಿಕಾರಿಗಳ ನ್ಯಾಯಾಲಯ, ಪಾಂಡವಪುರದಲ್ಲಿ ಆರ್ ಮಿಸ್ ಕೇಸ್ ಹಾಕಿದ್ದೇವೆ ಎಂದರೆ ಸರಿ. ಸಾಕ್ಷಿಗೆ ಈಗ ನಿಪಿ 8 ನ್ನು ತೋರಿಸುತ್ತಿದ್ದು ಸದರಿ ನಿಪಿ 8 ರಲ್ಲಿ ಕಟ್ಟುತ್ತಿರುವ ಮನೆಯ ದಕ್ಷಿಣಕ್ಕೆ ಕಾಡನಸಿದ್ದೇಗೌಡನ ಮಕ್ಕಳು ಅಮಾಸೇಗೌಡ , ಚಿಕ್ಕೇಗೌಡ, ಮಾದೇಗೌಡ , ಶಂಕರೇಗೌಡ , ವರದರಾಜು ಇವರು ಮನೆ ಕಟ್ಟಿದ್ದಾರೆ ಎಂದರೆ ಸರಿ. ಚಿಕ್ಕೇಗೌಡ ಮತ್ತು ಮಾದೇಗೌಡ ಇವರು ಮನೆ ಕಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ಕಾಡನಸಿದ್ದೇಗೌಡನಿಗೆ 5 ಜನ ಗಂಡುಮಕ್ಕಳು ಇಬ್ಬರು ಹೆಣ್ಣುಮಕ್ಕಳು ಎಂದರೆ ಗೊತ್ತಿಲ್ಲ. ಕಮಲಮ್ಮಳ ಮಗ ಹನುಮಂತ ಗೊತ್ತಿಲ್ಲ. ಕಮಲಮ್ಮ ಗೊತ್ತು. ಕಮಲಮ್ಮಳ ಗಂಡ ರಾಮೇಗೌಡನನ್ನು ನೋಡಿಲ್ಲ ಆದರೆ ಅವನ ಹೆಸರು ಕೇಳಿದ್ದೇನೆ. ರಾಮೇಗೌಡನ ತಂದೆ ಹೆಸರು ಹನುಮಂತೇಗೌಡ ಇವರನ್ನು ನೋಡಿಲ್ಲ. ಸದರಿ ಹನುಮಂತೇಗೌಡ ಇವರೂ ಸಹ ಬೇಕಾದಷ್ಟು ಸೈಟ್ ಮಾರಿಕೊಂಡಿದ್ದಾರೆ ಎಂದರೆ ಗೊತ್ತಿಲ್ಲ.

ರಾಮೇಗೌಡ ಇವರ ಹೆಸರು ಕೇಳಿದ್ದು ಅವರನ್ನು ನೋಡಿಲ್ಲ. ಸದರಿ ರಾಮೇಗೌಡ ಹೆಂಡತಿ ಕಮಲಮ್ಮ ಇವರನ್ನು ನೋಡಿದ್ದೇನೆ. ಸದರಿ ಕಮಲಮ್ಮ ಇವರು 26.04.1999 ರಂದು ಎಂ.ಭಾಗ್ಯಮ್ಮ ಕೋಂ ಸುಬ್ಬೇಗೌಡ ಇವರಿಗೆ ಅಕ್ಕಿಹೆಬ್ಬಾಳು ಗ್ರಾಮದ ಸೈಟ್ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ

ಸೈಟಿನ ಪೂರ್ವಕ್ಕೆ ಸೈಟ್ ನಂ 13 , ಪಶ್ಚಿಮಕ್ಕೆ ಇಂದ್ರಮ್ಮಳ ನಿವೇಶನ ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಎಂ. ನಿಂಗೇಗೌಡರ ಜಮೀನು ಸದರಿ ಚಕ್ಕುಬಂದಿ ನಡುವೆ ಇರುವ ಸೈಟನ್ನು ನೋಡಿಲ್ಲ ಹಾಗೂ ಅದರ ಬಗ್ಗೆ ಗೊತ್ತಿಲ್ಲ. ನಿಂಗೇಗೌಡ ಗೊತ್ತು ಆದರೆ ಎಂ.ನಿಂಗೇಗೌಡ ಗೊತ್ತಿಲ್ಲ. ಎಂ.ನಿಂಗೇಗೌಡರ ತಂದೆ ಮೊಗಣ್ಣಗೌಡ ಗೊತ್ತಿಲ್ಲ. ಕಮಲಮ್ಮಳ ಜಾಗದ ದಕ್ಷಿಣಕ್ಕೆ ಪ್ರತಿವಾದಿ ಈಗ ಮನೆ ಕಟ್ಟುತ್ತಿದ್ದಾರೆ ಎಂದರೆ ಸರಿ. ದಾವಾ ಜಮೀನಿನ ಉತ್ತರಕ್ಕೆ ಕಾಳೇಗೌಡ ಜಮೀನಾಗಲೀ ಆಗಲೀ ಅಥವಾ ಮೊಗಣ್ಣಗೌಡರ ಜಮೀನಾಗಲೀ ಇರುವುದಿಲ್ಲ ಎಂದರೆ ಸಾಕ್ಷಿಯು ಇದೆ ಎನ್ನುತ್ತಾರೆ. ಕಮಲಮ್ಮಳ ಜಮೀನು ನೋಡಿಲ್ಲ. ಪ್ರತಿವಾದಿ ಕಟ್ಟುತ್ತಿರುವ ಮನೆಯ ಉತ್ತರಕ್ಕೆ ಸುಮಾರು 4 ಮನೆ ಕಟ್ಟಿಸಿ ಬಾಡಿಗೆಗೆ ಕೊಟ್ಟಿದ್ದಾರೆ ಎಂದರೆ (70 ಚದುರ) ಗೊತ್ತಿಲ್ಲ.

ನಮ್ಮ ಮನೆಯ ಅಕ್ಕಪಕ್ಕವಾಗಲೀ ಅಥವಾ ಸುತ್ತಮುತ್ತಲಾಗಲೀ ಜಗದೀಶ ತಂದೆ ಸಣ್ಣಪ್ಪ ಇವರ ಮನೆ ಇಲ್ಲ ಎಂದರೆ ಸಾಕ್ಷಿಯು ಅದರ ಬಗ್ಗೆ ಗೊತ್ತಿಲ್ಲ ಆದರೆ ನ್ಯಾಯಾಲಯದಿಂದ ನನಗೆ ಸಮನ್ಸ್ ಬಂದಿತದ್ದು ಈ ಕೇಸಿನಲ್ಲಿ ಸಾಕ್ಷಿ ನುಡಿಯಲು ಬಂದಿದ್ದೇನೆ ಎನ್ನುತ್ತಾರೆ. ಪೂರ್ವಕ್ಕೆ ರಸ್ತೆ ಪಶ್ಚಿಮಕ್ಕೆ ಮಾಯಪ್ಪನ ಜಮೀನು ದಕ್ಷಿಣಕ್ಕೆ ನಿನ್ನ ತಮ್ಮ ಅಂದರೆ ಕಾಳೇಗೌಡನ ತಮ್ಮ ಸಿದ್ದೇಗೌಡನ ಜಮೀನು ಉತ್ತರಕ್ಕೆ ನನ್ನ ಹಿಸ್ಸೆ ಅಂದೆರ ಮೊಗಣ್ಣಗೌಡನ ಜಮೀನು ಈ ಚಕ್ಕುಬಂದಿ ನಡುವೆ ಜಮೀನನ್ನು ನೋಡಿಲ್ಲ. ಸಾಕ್ಷಿ ಮುಂದುವರೆದು ಸದರಿ ಜಮೀನಿನ ಪೂರ್ವಕ್ಕೆ ರಸ್ತೆ ಮತ್ತು ಪಶ್ಚಿಮಕ್ಕ ಮಾಯಪ್ಪನ ಜಮೀನು ಇರುವುದು ಸರಿ ಆದರೆ ಉತ್ತರ ದಕ್ಷಿಣಕ್ಕೆ ಹೇಳಿರುವ ಚಕ್ಕುಬಂದಿ ನನಗೆಗೊತ್ತಿಲ್ಲ. ಸದರಿ ಜಮೀನು ಈಗ ಅಸ್ತಿತ್ವದಲ್ಲಿ ಎಂದರೆ ಸಾಕ್ಷಿಯು ಒಟ್ಟಿನಲ್ಲಿ ವಾದಿಯರು ಸ್ವಾದೀನದಲ್ಲಿದ್ದು ಉತ್ತರ ಮತ್ತು ದಕ್ಷಿಣಕ್ಕೆ ಚಕ್ಕುಬಂದಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಮಾಯಪ್ಪನ ಮಗಳೇ 1 ನೇ ವಾದಿ ಎಂದರೆ ಸರಿ. ಸದರಿ 1 ನೇ ವಾದಿಗೆ 3 ಜನ ಗಂಡುಮಕ್ಕಳು ಹಾಗೂ 3 ಜನ ಹೆಣ್ಣುಮಕ್ಕಳು ಎಂದರೆ ಸರಿ. ಮಾಯಪ್ಪನ ಮಗ ಮರಿಯಪ್ಪ ಸತ್ತುಹೋಗಿದ್ದಾರೆ ಎಂದರೆ ಸಾಕ್ಷಿಯು ನಾನು ಅವರು ಅವರನ್ನು ನೋಡಿಲ್ಲ ಎನ್ನುತ್ತಾರೆ. 1 ನೇ ವಾದಿಯ ಅಳಿಯ ಅಂದರೆ 2 ನೇ ವಾದಿಯ ಗಂಡ ಕೃಷ್ಣ ಈಗ ಎಲ್ಲಿದ್ದಾನೆ ಎಂಬುದು ಗೊತ್ತಿಲ್ಲ ಹಾಗೂ ಆತನು ನಾಪತ್ತೆಯಾಗಿ ಸುಮಾರು 31 ವರ್ಷ ಆಗಿದೆ ಎಂದರೆ ಸಾಕ್ಷಿಯ ಒಟ್ಟಿನಲ್ಲಿ ನಾನು ಸದರಿ ಕೃಷ್ಣನನ್ನು ನೋಡಿದ್ದು ಈಗ ಎಲ್ಲಿದ್ದಾನೆ ಗೊತ್ತಿಲ್ಲ ಎನ್ನುತ್ತಾರೆ. ಜವರೇಗೌಡ ತೀರಿಕೊಂಡು ಸುಮಾರು 20 ವರ್ಷ ಆಯಿತು ಎಂದರೆ ಸರಿ. 1958 ನೇ ಇಸವಿಯಲ್ಲಿ ಪ್ರತಿವಾದಿ, ಮೊಗಣ್ಣಗೌಡ, ಕಾಳೇಗೌಡ, ಸಿದ್ದಲಿಂಗೇಗೌಡ, ಹಾಗೂ ಎಂ.ನಿಂಗೇಗೌಡ ಇವರ ಮದ್ಯೆ ಏನು ವ್ಯವಹಾರ ಅಗಿದೆ ಎಂಬುದು ಗೊತ್ತಿಲ್ಲ. ನಮ್ಮ ಮತ್ತು ಪ್ರತಿವಾದಿಯ ನಡುವೆ ಜಮೀನು ವ್ಯಾಜ್ಯ ಇರುವ ಕಾರಣ ನಾನು ಈ ದಿನ ನ್ಯಾಯಾಯದ ಮುಂದೆ ಹಾಜರಿರುವ ಸಿದ್ದೇಗೌಡ ಹಾಗೂ ವಾದಿಯರ ಮಾತು ಕೇಳಿ ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಸಾಕ್ಷಿದಾರರ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ಬೆರಳಚ್ಚು ಮಾಡಲಾಗಿದೆ.)

ಸಾ ಓ ಹೇ ಕೇ ಸ ಅದೆ.

ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ.
ದಂಡಾಧಿಕಾರಿಗಳು, ಕೃಷ್ಣರಾಜಪೇಟೆ.